ಬೆವಿಕಂ
BESCOM

ಕಾರ್ಯನಿರ್ವಾಹಕ ಅಭಿಯಂತರರು (ವಿ.)ರವರ ಕಛೇರಿ
**OFFICE OF THE EXECUTIVE ENGINEER (Ele.)**

ಸಂಖ್ಯೆ: ಕಾನಿಇಂ/ಸಕಾನಿಇಂ(ಕ)/ತಾಸ-3/2025-26/ 1226-27 ದಿನಾಂಕ: 16 MAY 2025

ಲಗತ್ತು:

ರವರಿಗೆ,

ಶ್ರೀ ಲಕ್ಷ್ಮೀನಾರಾಯಣ ಬಿನ್ ಯಲ್ಲಪ್ಪ,
ಹನುಮಂತಪುರ ಗ್ರಾಮ, ಮಂಡಿಕಲ್ ಹೋಬಳಿ,
ಚಿಕ್ಕಬಳ್ಳಾಪುರ ತಾಲ್ಲೂಕು

ಮಾನ್ಯರೇ,

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು ಮಂಡಿಕಲ್ ಹೋಬಳಿ ಹನುಮಂತಪುರ ಗ್ರಾಮದ ಸರ್ವೆ ನಂ. 20 ರಲ್ಲಿ ಕೃಷಿ ನೀರಾವರಿ ಪಂಪುಸೆಟ್ ಸ್ಥಾವರಕ್ಕೆ 10ಹೆಚ್.ಪಿ ಹೊರೆಯ ವಿದ್ಯುತ್ ಸಂಪರ್ಕವನ್ನು ಕೆ.ಇ.ಆರ್.ಸಿ ಷರತ್ತು 6.0 ರನ್ವಯ ಸ್ವಯಂ ನಿರ್ವಹಣಾ ಕಾಮಗಾರಿ ಅಡಿಯಲ್ಲಿ ನೀಡುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ / 107 / ವಿ.ಎಸ್.ಸಿ / 2025 / 15.04.2025
2) ಆನ್ ಲೈನ್ ಅರ್ಜಿ ಸಂಖ್ಯೆ: **1212105250020 / 15.05.2025**

>>>><<<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಮನವಿಯಂತೆ **ಚಿಕ್ಕಬಳ್ಳಾಪುರ ತಾಲ್ಲೂಕು ಮಂಡಕಲ್ ಹೋಬಳಿ ಹನುಮಂತಪುರ ಗ್ರಾಮದ ಸರ್ವೆ ನಂ. 20** ರಲ್ಲಿ ಕೃಷಿ ನೀರಾವರಿ ಪಂಪುಸೆಟ್ ಸ್ಥಾವರಕ್ಕೆ **10 ಹೆಚ್.ಪಿ** ಹೊರೆಯ ವಿದ್ಯುತ್ ಸಂಪರ್ಕವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಸ್ವಯಂ ನಿರ್ವಹಣಾ ಕಾಮಗಾರಿ ಅಡಿಯಲ್ಲಿ ನಿರ್ವಹಿಸಲು ಮಂಜೂರಾತಿ ನೀಡಲಾಗಿದೆ.

1. ಈ ಕೆಳಕಂಡ ಮೊತ್ತವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಬೆವಿಕಂ. **ಚಿಕ್ಕಬಳ್ಳಾಪುರ ಗ್ರಾಮೀಣ** ಉಪ ವಿಭಾಗ ರವರ ಹೆಸರಿನಲ್ಲಿ ಡಿಡಿ ಮುಖಾಂತರ ಈ ಪತ್ರದ ದಿನಾಂಕದಿಂದ 90 ದಿನಗೊಳಗಾಗಿ ಪಾವತಿಸಬೇಕು.

| **ಠೇವಣಿ ವಿವರಗಳು (ಲೆಕ್ಕ ಶೀರ್ಷಿಕೆ)** | **ಠೇವಣಿಯ ಮೊತ್ತ** | **ರೂ ಅಕ್ಷರಗಳಲ್ಲಿ** |
|---|---|---|
| 3 ತಿಂಗಳ ಕನಿಷ್ಠ ಠೇವಣಿ | 24,900.00 | ರೂ. ಇಪ್ಪತ್ನಾಲ್ಕು ಸಾವಿರದ ಒಂಬತ್ತು ನೂರು ಮಾತ್ರ |
| ಸಾಮಗ್ರಿಗಳ ತಪಸಣಾ ಶುಲ್ಕ | 5,000.00 | ರೂ. ಐದು ಸಾವಿರ ಮಾತ್ರ |
| ಮಾಪಕ ಭದ್ರತಾ ಶುಲ್ಕ | 2,808.00 | ರೂ. ಎರಡು ಸಾವಿರದ ಎಂಟು ನೂರ ಎಂಟು ಮಾತ್ರ |
| ಮಾಪಕ ಪೆಟ್ಟಿಗೆ ಶುಲ್ಕ | 4,300.00 | ರೂ. ನಾಲ್ಕು ಸಾವಿರದ ಮೂರು ನೂರು ಮಾತ್ರ |
| ಪರಿವರ್ತಕದ ತಪಾಸಣಾ ಶುಲ್ಕ | 1,000.00 | ರೂ. ಒಂದು ಸಾವಿರ ಮಾತ್ರ |
| **ಒಟ್ಟು** | **38,008.00** | |

2. ಕಾಮಗಾರಿಗಳನ್ನು ಕರ್ನಾಟಕ ರಾಜ್ಯದ ಅನುಮತಿ ಪಡೆದ ಪ್ರಥಮ ದರ್ಜೆ ಗುತ್ತಿಗೆದಾರರ ಮುಖೇನ ಬೆವಿಕಂ ನ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಿರ್ವಹಿಸುವುದು.

3. ಪರಿವರ್ತಕಗಳು, ವಾಹಕಗಳು, ವಿದ್ಯುತ್ ಕಂಬಗಳು ಹಾಗೂ ಮುಂತಾದ ವಿದ್ಯುತ್ ಸಾಮಾಗ್ರಿಗಳು IE/BESCOM ಮಾನದಂಡಗಳ ಪ್ರಕಾರ ಇರಬೇಕು ಮತ್ತು ಎಲ್ಲಾ ಸಾಮಾಗ್ರಿಗಳ ಗುಣಮಟ್ಟವನ್ನು ಸಂಬಂಧಪಟ್ಟ ಬೆ.ವಿ.ಕಂ ನ ಅಧಿಕಾರಿಗಳು ಖರೀದಿ ಮಾಡುವ ಮೊದಲೇ ಪರಿಶೀಲಿಸಬೇಕು.

...2

4. ಬೆವಿಕಂ ಅನುಮೋದನೆ ಪಡೆದ ಮಾರಾಟದಾರರಿಂದ (approved vendor) ಸಾಮಾಗ್ರಿಗಳ ಖರೀದಿ ಮಾಡಿರುವುದಕ್ಕೆ ದಾಖಲಾತಿಗಾಗಿ ಬಿಲ್ಲುಗಳನ್ನು / invoices ಗಳನ್ನು ಸಲ್ಲಿಸಬೇಕು ಹಾಗೂ ನಿಗಮ ಕಛೇರಿಯ ಸುತ್ತೋಲೆ ಸಂಖ್ಯೆ BESCOM/BC-9/CGM (CA)/DGM (CA-3)/F-752/13-14/CYS-113 dated 29.8.2013 ಪ್ರಕಾರ ಅರ್ಜಿದಾರರು ಪಾಲಿಮರ್ ವಿದ್ಯುತ್ ನಿರೋಧಕವನ್ನು ಮಾತ್ರ ಬಳಸಬೇಕು.
5. ಎಲ್ಲಾ ಕೆಲಸವು ಅಂದಾಜು ಪಟ್ಟಿ ಪ್ರಕಾರ ಪೂರ್ಣಗೊಂಡ ನಂತರ ವಿತರಣಾ ಕೇಂದ್ರ ಮತ್ತು ಅದರ ಸಂಬಂಧಪಟ್ಟ ಸಾಮಾಗ್ರಿಗಳನ್ನು ಬೆವಿಕಂ ರವರಿಗೆ ಹಸ್ತಾಂತರಿಸುವುದು.
6. ಕಾಮಗಾರಿಗಳಿಗೆ ಬಳಸಿದ ಸಾಮಾಗ್ರಿಗಳ ಗುಣಮಟ್ಟವು ಮತ್ತು ಕಾಮಗಾರಿಯ ಗುಣಮಟ್ಟವನ್ನು, ಬೆವಿಕಂರವರು ಮಾರ್ಗಗಳನ್ನು ಮತ್ತು ಸಾಮಾಗ್ರಿಗಳನ್ನು ತೆಗೆದುಕೊಂಡ ದಿನದಿಂದ ಒಂದು ವರ್ಷದ ಅವಧಿವರೆಗೂ ಖಾತರಿ ನೀಡಬೇಕು.
7. ಮುಂದೆ ಆಗುವ ಯಾವುದೇ ಭಾದ್ಯತೆಗಳಿಗೆ ಬೆವಿಕಂ ಜವಾಬ್ದಾರಿಯಾಗಿರುವುದಿಲ್ಲ.
8. ನಿಗಮದಿಂದ ಅನುಮೋದಿಸಲ್ಪಟ್ಟ ತಯಾರಿಕೆಯ ಸೂಕ್ತ ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು IS 1180-2014 ಅನುಗುಣವಾಗಿರಬೇಕು ಹಾಗು ಗರಿಷ್ಠ ನಷ್ಟದ 50% & 100% ಹೊರೆಯ ವಿದ್ಯುತ್ ಸಾಮರ್ಥ್ಯದ ಬಿ.ಇ.ಇ ಸ್ಟಾರ್–1 ರ ನಿರ್ದಿಷ್ಟ ನಷ್ಟದ IS 1180-2014 ನಿಗದಿತ ಮಿತಿಗಿಂತ ಹೆಚ್ಚಾಗಬಾರದು ಮತ್ತು ಪರಿವರ್ತಕವನ್ನು ಸ್ವಯಂ-ಕಾಮಗಾರಿ ಮೂಲಕ ಇದಕ್ಕಾಗಿ ತಯಾರಿಸುವ ಅಂದಾಜು ಪಟ್ಟಿಯ ಪ್ರಕಾರ ಅಳವಡಿಸುವುದು. BESCOM/BC-2/DT/GM (QS&S)/2014-15/CYS-75/03.01.2015.
9. ಈ ವಿದ್ಯುತ್ ಮಂಜೂರಾತಿ ಪತ್ರ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗೆ 200 ರೂಪಾಯಿ ಬೆಲೆಯ ಛಾಪ ಕಾಗದದ ಮೇಲೆ ಕರಾರು ಪತ್ರ ಮಾಡಿಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನೀಡಿರುವ ವಿದ್ಯುತ್ ಮಂಜೂರಾತಿ ಕಾಲಾತೀತವಾಗುತ್ತದೆ.
10. ನೀವು ಪಂಪು ಕೋಣೆಯೊಳಗೆ ಪಂಪುಸೆಟ್ಟನ್ನು ಕೂಡಿಸಿ ಅದಕ್ಕೆ ಮಾನ್ಯತೆ ಪಡೆದ ವಿದ್ಯುತ್ ಗುತ್ತಿಗೆದಾರರಿಂದ ವೈರಿಂಗ್ ಕೆಲಸ ಮಾಡಿಸಿ ಕೆಲಸದ ಪರಿಪೂರ್ಣತೆಯ ವರದಿ ಮತ್ತು ದ್ವಿಪ್ರತಿಗಳಲ್ಲಿ ವೈರಿಂಗ್ ನಕ್ಷೆಯನ್ನು ನೀಡಬೇಕು.
11. ನೀವು ಸೂಕ್ತ ಸಾಮರ್ಥ್ಯದ ಕೆಪ್ಯಾಸಿಟರುಗಳನ್ನು ಅಳವಡಿಸತಕ್ಕದ್ದು.
12. ಕರ್ನಾಟಕ ವಿದ್ಯುತ್ ಮಂಡಳಿಯ ಅಧಿಸೂಚನೆ ಕ್ರಮಾಂಕ: ಕೆ.ಇ.ಬಿ/1-85-86, ದಿನಾಂಕ: 20.02.1988 ಪ್ರಕಾರ ನೀರಾವರಿ ಪಂಪುಸೆಟ್ಟುಗಳಿಗೆ ಕಂಪನಿ ಅನುಮೋದಿಸಿರುವ ಹೆಚ್.ಡಿ.ಸಿ.ಇ(ಅಧಿಕ ಸಾಂದ್ರತೆಯ ಪಾಲಿಥಿನ್) ಅಥವಾ ಪಿವಿಸಿ ಪೈಪುಗಳನ್ನು ಮತ್ತು ಕಡಿಮೆ ಘರ್ಷಣೆಯ ಫೂಟ್ವಾಲ್ವ್ ಗಳನ್ನು ಅಳವಡಿಸತಕ್ಕದ್ದು.
13. ಬ್ಯೂರೊ ಆಫ್ ಎನರ್ಜಿ ಎಫಿಶಿಯನ್ಸಿ ಇಂದ ಪ್ರಮಾಣೀಕೃತವಾದ ವಿದ್ಯುತ್ ದಕ್ಷತೆಯ ಪಂಪುಸೆಟ್ಟನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
14. ನೀರೊಳಗಿನ ಪಂಪುಸೆಟ್ಟು (ಸಬ್‌ಮರ್ಸಿಬಲ್ ಪಂಪುಸೆಟ್ಟು) ಗಳಾಗಿದ್ದಲ್ಲಿ ಹೆಚ್.ಡಿ.ಪಿ.ಇ ಅಥವಾ ಆರ್.ಪಿ.ವಿ.ಸಿ ಅಥವಾ ಜಿ.ಐ ಪೈಪುಗಳನ್ನು ಉಪಯೋಗಿಸಬಹುದು.
15. ಹಣ ಪಾವತಿ ಮಾಡಿರುವ ದೃಢೀಕರಣದ ಪತ್ರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ,) **ಚಿಕ್ಕಬಳ್ಳಾಪುರ ಗ್ರಾಮೀಣ ಉಪ ವಿಭಾಗದವರು,** ಆಡಳಿತ ಅನುಮೋದನೆ ನೀಡಲು ಈ ಕಛೇರಿಗೆ ಕಳುಹಿಸಿ ಕೊಡಬೇಕು.
16. ಭವಿಷ್ಯದಲ್ಲಿ ಬೆ.ವಿ.ಕಂ ನ ದರಪಟ್ಟಿ ಪರಿಷ್ಕೃತಗೊಂಡಲ್ಲಿ ಅಥವಾ ಕಾಮಗಾರಿ ನಿರ್ವಹಿಸುವಾಗ ಅಂದಾಜು ಪಟ್ಟಿಯು ಪರಿಷ್ಕೃತವಾದಾಗ ವ್ಯತ್ಯಾಸದ ಮೊತ್ತವನ್ನು ಕೂಡಲೇ ಅದನ್ನು ಬೆವಿಕಂ / ಕವಿಪ್ರನಿನಿಗೆ ಪಾವತಿಸಬೇಕು.

ತಮ್ಮ ವಿಶ್ವಾಸಿ

(ರಮೇಶ್ ಕುಮಾರ್.ಪಿ.ಜಿ)
ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಬೆ.ವಿ.ಕಂ, ಚಿಕ್ಕಬಳ್ಳಾಪುರ

ಪ್ರತಿಯನ್ನು :

- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಬೆವಿಕಂ, ಚಿಕ್ಕಬಳ್ಳಾಪುರ ಗ್ರಾಮೀಣ ಉಪ ವಿಭಾಗ ರವರ ಮಾಹಿತಿಗಾಗಿ.
- ತಾ.ಸ–3, ತಾಂತ್ರಿಕ ಶಾಖೆ, ಬೆವಿಕಂ, ಚಿಕ್ಕಬಳ್ಳಾಪುರ.